

# ದಸರಾ ಸಂಭ್ರಮ; ಉಡುಪಿನ ಸಡಗರ

ನವರಾತ್ರಿಯಲ್ಲಿ ಬೆಳಗಿನ ಜಾವ ದೇವತೆಯಂತೆ ಅಲಂಕಾರ ಮಾಡಿಕೊಂಡು ಬೆಳಕು ಚೆಲುತ್ತಾ ಕೈಯಲ್ಲಿ ಆರತಿ ಹಿಡಿದುಕೊಂಡು ದೇವಸ್ಥಾನಕ್ಕೆ ಹೋಗುವ ಮಹಿಳೆಯರು, ಸಂಜೆ ದಾಂಡಿಯಾ ಹಿಡಿದು ಹೆಜ್ಜೆ ಹಾಕಿ ಸಂಭ್ರಮಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ದಾಂಡಿಯಾ ದಸರಾ ಹಬ್ಬದ ಪ್ರಮುಖ ಆಕರ್ಷಣೆ. ಅದಕ್ಕೆಂದೆ ಮಹಿಳೆಯರು ಕೆಲ ದಿನಗಳಿಂದಲೇ ತಯಾರಿ ಆರಂಭಿಸುತ್ತಾರೆ. ದಾಂಡಿಯಾ ಆಡುವಾಗ ಮಹಿಳೆಯರು ಧರಿಸುವ ಉಡುಪನ್ನು ಚನಿಯಾ ಚೋಲಿ, ಘಾಗ್ರಾ ಎನ್ನಲಾಗುತ್ತದೆ. ಇದು ಕನ್ನಡಿ, ಜರಿ, ದಾರದಿಂದ (ಥ್ರೆಡ್ ವರ್ಕ್) ಮಾಡಿದ ವಿನ್ಯಾಸದಿಂದ ಕೂಡಿದ್ದು, ನೋಡುಗರ ಗಮನ ಸೆಳೆಯುತ್ತದೆ.

ದಾಂಡಿಯಾ ಗುಜರಾತಿ ಮೂಲದ ನೃತ್ಯವಾಗಿದ್ದು, ಅಲ್ಲಿನ ಜನರ ಉಡುಗೆಗಳನ್ನೇ ದಾಂಡಿಯಾ ಆಡುವಾಗ ಧರಿಸಲಾಗುತ್ತದೆ. ಜೊತೆಗೆ ಅಲ್ಲಿನ ಜನರ ನಿತ್ಯದ ಬದುಕನ್ನು ಉಡುಗೆ ಮೇಲೆ ಅನಾವರಣಗೊಳಿಸಲಾಗುತ್ತದೆ. ಗಾಢ ಬಣ್ಣಗಳಿಗೆ ಹೆಚ್ಚು ಆದ್ಯತೆ ನೀಡಲಾಗುತ್ತಿದ್ದು, ಕೆಂಪು, ಗುಲಾಬಿ, ಕೇಸರಿ, ಹಳದಿ, ಹಸಿರು, ಗಿಳಿಹಸಿರು, ನೀಲಿ ಬಣ್ಣದ ಉಡುಪುಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಬಿಳಿ ಹಾಗೂ ಕಪ್ಪು ಬಣ್ಣದ ಉಡುಗೆಗೆ ಸದಾ ಬೇಡಿಕೆ ಇರುತ್ತದೆ. ಆದರೆ ಮಲ್ಟಿ ಕಲರ್ ಇತ್ತೀಚಿನ ಟ್ರೆಂಡ್ ಆಗಿದೆ.

> ನವರಾತ್ರಿಯಲ್ಲಿ ಹಬ್ಬದ ಸಡಗರಕ್ಕೆ ಸಾಥಿ ಕೊಡುವುದೇ ಉಡುಗೆ, ತೊಡುಗೆ, ಒಡವೆ ಹಾಗೂ ಸಂಜೆ ವೇಳೆ ಸಂಭ್ರಮಿಸುವ ನೃತ್ಯ.

## ಉಡುಗೆ ವೈಶಿಷ್ಟ್ಯ

ದಾಂಡಿಯಾ ಆಡುವಾಗ ಧರಿಸುವ ಚನಿಯಾ ಚೋಲಿ, ಘಾಗ್ರಾದ 5.5 ಮೀಟರ್ ಶುದ್ಧ ಕಾಟನ್ ಬಟ್ಟೆ ಮೇಲೆ ಮಹಿಳೆಯರು, ಪುರುಷರು ದಾಂಡಿಯಾ, ಗಾರ್ಭಾ ನೃತ್ಯ ಮಾಡುತ್ತಿರುವ ಡೋಲು ಹಿಡಿದುಕೊಂಡಿರುವ ಹಾಗೂ ಹೂವುಗಳನ್ನು ಹಿಡಿದುಕೊಂಡಿರುವ, ಬನಾರಸ್ ಬಳ್ಳಿಯಂತಹ ಚಿತ್ರಗಳನ್ನು ಪ್ರಿಂಟ್ ಮಾಡಲಾಗುತ್ತದೆ. ಜೊತೆಗೆ ಗಾಢ ಬಣ್ಣದ ಬಟ್ಟೆಗಳನ್ನು ತ್ರಿಕೋನಾಕಾರದಲ್ಲಿ ಕತ್ತರಿಸಿ, ಜೋಡಿಸಿ ಅದರ ಮೇಲೆ ಕನ್ನಡಿ, ಜರಿ ವರ್ಕ್ ಮಾಡಲಾಗುತ್ತದೆ. ಅಲ್ಲಲ್ಲಿ ಆಕರ್ಷಕವಾದ ಗೊಂಡೆಗಳನ್ನು ಜೋತು ಬಿಡಲಾಗುತ್ತದೆ. ಬಾರ್ಡರ್‌ಗೆ ಥ್ರೆಡ್ ವರ್ಕ್ ಮಾಡಲಾಗಿರುತ್ತದೆ.

‘ಒಂದು ಮೀಟರ್ ಬಟ್ಟೆಯಲ್ಲಿ ಹೊಲಿಯುವ ಬ್ಲೌಸ್ ವಿನ್ಯಾಸವೂ ವಿಭಿನ್ನವಾಗಿದ್ದು, ಹಿಂದೆ ಹುಕ್ಕು ಅಥವಾ ಬಟನ್ ಇರುವುದಿಲ್ಲ. ದಾರಗಳಿಂದ ಕಟ್ಟುವುದರಿಂದ (ಡೋರಿ) ಇದನ್ನು ‘ಲಟಕಿನ್’ ಎನ್ನುತ್ತಾರೆ. ಸಾಮಾನ್ಯವಾಗಿ ಗುಜರಾತಿ ಮಹಿಳೆಯರು ತಲೆ ಮೇಲೆ ಸೆರಗು ಹಾಕುವುದರಿಂದ ಹಾಗೇ ಧರಿಸುತ್ತಿದ್ದರು. ಈಗ ವಿನ್ಯಾಸದಲ್ಲೂ ಕೊಂಚ ಬದಲಾಗಿದ್ದು, ಹಿಂದೆ ಸ್ವಲ್ಪ ಪ್ಯಾಚ್ ವರ್ಕ್ ಮಾಡಿ, ಡೋರಿ ಹಾಕಲಾಗುತ್ತದೆ. ಇದರ ಜೊತೆಗೆ ಬಳಸುವ ದುಪ್ಪಟ್ಟಾ 2.5 ಮೀಟರ್ ಇದ್ದು, ಚಿಕ್ಕಚಿಕ್ಕ ಕನ್ನಡಿ, ಕುಂದನ್ ವರ್ಕ್‌ನಿಂದ ವಿನ್ಯಾಸ ಮಾಡಲಾಗಿರುತ್ತದೆ’ ಎನ್ನುತ್ತಾರೆ ಧಾರವಾಡದ ಹರಿಹರಸ್ ಕಾಸ್ಟ್ಯೂಮ್‌ನ ಮಾಲೀಕ ಕುಸುಮಾ ಹರಿಹರ.

‘ಉಡುಗೆಯಷ್ಟೇ ಆಭರಣಗಳು ಮುಖ್ಯವಾಗುತ್ತವೆ. ಸಾಮಾನ್ಯವಾಗಿ ಗುಜರಾತಿ ಮಹಿಳೆಯರು ಬೆಳ್ಳಿ ಆಭರಣಗಳನ್ನು ಹೆಚ್ಚು ಬಳಸತ್ತಿದ್ದರು. ಆದರೆ ಇತ್ತೀಚಿಗೆ ಮೆಟಲ್ ಆಭರಣಗಳನ್ನು ಬಳಸಲಾಗುತ್ತಿದೆ. ದೊಡ್ಡ ಜುಮಕಿ, ಎರಡು ಎಳೆಯ ಸರ, ಸೊಂಟದ ಪಟ್ಟಿ, ವಿಭಿನ್ನ ರೀತಿಯ ಬಳೆ, ಕಾಲಿನಲ್ಲಿ ಕಡ, ಬೈತಲೆ ಬೊಟ್ಟು ಧರಿಸುತ್ತಾರೆ’ ಎನ್ನುತ್ತಾರೆ ಕುಸುಮಾ.

ಕೆಲವರು ಸರಳ ಲೆಹೆಂಗಾ ಇಷ್ಟಪಡುತ್ತಾರೆ. ವಿನ್ಯಾಸಕ್ಕೆ ತಕ್ಕಂತೆ ₹1200ರಿಂದ ₹10 ಸಾವಿರದವರೆಗೆ ದರ ಇರುತ್ತದೆ. ಬಹುತೇಕರು ಖರೀದಿಸುವ ಬದಲು ದಸರಾ ಹಬ್ಬದಲ್ಲಿ ಬಾಡಿಗೆಗೆ ತೆಗೆದುಕೊಳ್ಳುತ್ತಾರೆ. ಪ್ರತಿ ಸೆಟ್ ವಸ್ತ್ರಾಭರಣಗಳಿಗೆ ₹500 ದರ ನಿಗದಿಪಡಿಸಲಾಗಿದೆ.

ಪುರುಷರ ಉಡುಗೆಯೂ ವಿಭಿನ್ನ. ಅವರು ಕೇಕೆಡಿಯಾ (ಎದೆಭಾಗದಲ್ಲಿ ಬಿಗಿ, ಸೊಂಟದಲ್ಲಿ ಫ್ರಾಕ್‌ನಂತಿರುವ ಪೂರ್ಣ ತೋಳಿನ ಕುರ್ತಾ), ಧೋತಿ/ ಕಫ್ನಿ ಪೈಜಾಮಾ (ಬಹು ನೆರಿಗೆಗಳ ಪ್ಯಾಂಟ್) ಹಾಗೂ ತಲೆಗೆ ಪಗಡಿ ಹಾಕಿಕೊಳ್ಳುತ್ತಾರೆ. ಈ ಉಡುಗೆಯನ್ನು ಸ್ಪನ್ ಬಟ್ಟೆಯಲ್ಲಿ ವಿನ್ಯಾಸಗೊಳಿಸಲಾಗುತ್ತದೆ.

ಧೋತಿ 4 ಮೀಟರ್, ಕೆಡಿಯಾ 3 ಮೀಟರ್ ಬಟ್ಟೆಯಲ್ಲಿ ವಿನ್ಯಾಸ ಮಾಡಲಾಗುತ್ತದೆ. ಕನ್ನಡಿ, ಥ್ರೆಡ್ ವರ್ಕ್ ಹಾಗೂ ಲೇಸ್ ಹೆಚ್ಚು ಬಳಸಲಾಗುತ್ತದೆ. ಪಗಡಿ, ನೃತ್ಯ ಮಾಡುವಾಗ ಬೀಳದಂತೆ ತಲೆಗೆ ಬಿಗಿಯಾಗಿರುವಂತೆ ಬಳಸಲಾಗುತ್ತದೆ. ಕೆಲವೊಮ್ಮೆ ಪಗಡಿಗೆ ಕವಡೆಗಳನ್ನು ಬಳಸಲಾಗುತ್ತದೆ.

ಉಡುಗೆಗೆ ತಕ್ಕಂತೆ ಪುರುಷರು ಆಭರಣಗಳನ್ನು ಧರಿಸುತ್ತಾರೆ.

■ ಗೌರಮ್ಮ ಕಟ್ಟಿಮನಿ

